**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ 43/2022 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **23.02.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ** 3 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ ಎ.ಪಿ.ಎಸ್ ವಕೀಲರಿಂದಃ

ನಾನು ಎಂ.ಸೀಹಳ್ಳಿ ಗ್ರಾಮದಲ್ಲಿ ಪೂರ್ವಜರ ಕಾಲದಿಂದಲೂ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿಗಳ ತಂದೆ ಹಾಗೂ ತಾತಂದಿರು ಅದೇ ಗ್ರಾಮದಲ್ಲಿ ಹುಟ್ಟಿ ಬೆಳೆದಿರುತ್ತಾರೆ ಎಂದರೆ ಸರಿ. ಚನ್ನಬಸಪ್ಪ ರವರ ಮಗ ರಾಜೇಂದ್ರಪ್ಪ ರವರಿಗೆ ದಾವಾ ಆಸ್ತಿಯು ವಿಭಾಗದ ಮೂಲಕ ಬಂದಿರುತ್ತದೆ. ಸದರಿ ವಿಭಾಗದ ದಾಖಲೆಯನ್ನು ನೋಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿಯವರು ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಚನ್ನಬಸಪ್ಪ ರವರಿಗೆ ಒಟ್ಟು 4 ಜನ ಮಕ್ಕಳು ಇರುತ್ತಾರೆ. ದಾವಾ ಆಸ್ತಿಯು ರಾಜೇಂದ್ರಪ್ಪ ರವರ ಬಾಗಕ್ಕೆ ವಿಬಾಗದಲ್ಲಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಬೀಡು ಜಾಗವಾಗಿದ್ದು ಸದರಿ ಆಸ್ತಿಯು ಪುನಸ್ಥಾಪನೆ ಆಗಿರುವ ಬಾಬ್ತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರ ಎಂಬ ಪ್ರಶ್ನೆಗೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಆಸ್ತಿತ್ವದಲ್ಲಿ ಇಲ್ಲದ ಆಸ್ತಿಯನ್ನು ಕ್ರಮಯುತವಾಗಿ ಪುನಸ್ಥಾಪನೆ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಗಂಡ ದಿನಾಂಕ **04.02.1999** ರಲ್ಲಿ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದ ಬಾಬ್ತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದಲ್ಲಿ ಬರೆದಿರುವ ಆಸ್ತಿಯ ಚೆಕ್ಕುಬಂಧಿ ನನಗೆ ತಿಳಿದಿರುತ್ತದೆ . ಪೂರ್ವಕ್ಕೆ ಕುಮಾರಸ್ವಾಮಿ ಬಿನ್ ರಾಜಪ್ಪರವರ ಜಮೀನು, ಪಶ್ಚಿಮಕ್ಕೆ ಶಿವಣ್ಣರವರ ಖಾಲಿ ನಿವೇಶನ, ಉತ್ತರಕ್ಕೆ ಪ್ರತಿವಾದಿಗಳ ಆಸ್ತಿ ಹಾಗೂ ದಕ್ಷಿಣಕ್ಕೆ ಮಹದೇವಶೆಟ್ಟಿ, ಬಸವಶೆಟ್ಟಿ ಮತ್ತು ಕೃಷ್ಣಶೆಟ್ಟಿ ರವರ ಜಮೀನುಗಳು ಇರುತ್ತವೆ. ಕ್ರಯ ಪತ್ರದಲ್ಲಿರುವ ಆಸ್ತಿಯ ಚೆಕ್ಕುಬಂಧಿ ಬೇರೆ ಇದ್ದು , ದಾವಾ ಆಸ್ತಿಯ ಚೆಕ್ಕುಬಂಧಿ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ

ಮತ್ತು ಪ್ರತಿವಾದಿಗಳ ಮನೆ, ಖಾಲಿ ಜಾಗ ಮತ್ತು ಹಿತ್ತಲು ಜಾಗ ಒಂದೇ ಚೆಕ್ಕುಬಂಧಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ನಮ್ಮ ಆಸ್ತಿಯ ಉತ್ತರ ದಿಕ್ಕಿಗೆ ಇರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮತ್ತು ಪ್ರತಿವಾದಿಗಳ ಮನೆ, ಖಾಲಿ ಜಾಗ ಮತ್ತು ಹಿತ್ತಲು ಜಾಗ ಎಲ್ಲವೂ ಮಹದೇವಶೆಟ್ಟಿ, ಬಸವಶೆಟ್ಟಿ ಮತ್ತು ಕೃಷ್ಣಶೆಟ್ಟಿ ರವರ ಆಸ್ತಿಯ ಉತ್ತರ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

ರಾಜಮ್ಮ ಎನ್ನುವವರು ನನ್ನ ಅತ್ತೆ ಅಂದರೆ ನನ್ನ ಗಂಡನ ತಾಯಿ ಎಂದರೆ ಸರಿ. ದಾವಾ ಆಸ್ತಿಯನ್ನು ನನ್ನ ಅತ್ತೆಯವರು ಶಾಂತಪ್ಪರವರ ಮಗ ಮಲ್ಲಪ್ಪ ರವರಿಂದ ದಿನಾಂಕ **06.05.1968** ರ ಕ್ರಯ ಪತ್ರದಡಿಯಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ ಕಾಳಮಾದಪ್ಪನ ಪುಟ್ಟಮಾದಪ್ಪರವರ ಮನೆ ಮತ್ತು ಹಿತ್ತಲು ಎಂದರೆ ಸರಿ. ಪಶ್ಚಿಮಕ್ಕೆ ಮಲ್ಲಪ್ಪನವರ ಮಕ್ಕಳು ರವರ ಖಾಲಿ ನಿವೇಶನ ಎಂದರೆ ಸರಿ. ದಕ್ಷಿಣಕ್ಕೆ ಬಸವಶೆಟ್ಟಿರವರ ಮಕ್ಕಳು ನಂಜಶೆಟ್ಟಿರವರ ಜಮೀನು ಎಂದರೆ ಸರಿಯಲ್ಲ. ಉತ್ತರಕ್ಕೆ ನಮ್ಮ ಬಾಬ್ತು ಮನೆ ಎಂದರೆ ಸರಿ. ನನ್ನ ಅತ್ತೆಯವರು ಅವರು ಖರೀದಿ ಮಾಡಿದ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ ಬಸವಶೆಟ್ಟಿರವರ ಮಕ್ಕಳು ನಂಜಶೆಟ್ಟಿರವರ ಜಮೀನು ಇರುತ್ತದೆ ಎಂದು ತಪ್ಪಾಗಿ ಇರುತ್ತದೆ ಎಂದು ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯು ನನ್ನ ಅತ್ತೆ ಖರೀದಿ ಮಾಡಿದ ದಿನಾಂಕ **06.05.1968** ರಂದು ಖರೀದಿ ಮಾಡಿದ ಆಸ್ತಿಯ ಒಂದು ಬಾಗ ಎಂದರೆ ಸರಿಯಲ್ಲ.

ಪ್ರಕಾಶಮೂರ್ತಿ ಎನ್ನುವವರು ನನ್ನ ಬಾವ ಆಗಿರುತ್ತಾರೆ. ಸದರಿಯವರು ಹಾಗೂ ನನ್ನ ಗಂಡ ಅಣ್ಣ ತಮ್ಮಂದಿರು ಎಂದರೆ ಸರಿ. ನನ್ನ ಅತ್ತೆಯವರು ದಿನಾಂಕ **06.05.1968** ರಲ್ಲಿ ಖರೀದಿ ಮಾಡಿದ ಆಸ್ತಿಯನ್ನು ಅವರ ಮಗನಾದ ಪ್ರಕಾಶಮೂರ್ತಿ ರವರಿಗೆ ದಿನಾಂಕ **09.12.1998** ರ ಕ್ರಯಪತ್ರದಡಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿ ಸದರಿ ಪ್ರಕಾಶಮೂರ್ತಿ ರವರ ಮಗ ಎಂದರೆ ಸರಿ. ಅದೇ ರೀತಿ ಅಶೋಕ್ ರವರ ಸಹ ಅವರ ಮಗ ಎಂದರೆ ಸರಿ. ಪ್ರಕಾಶಮೂರ್ತಿ

ರವರಿಗೂ ಮಾರಾಟ ಮಾಡಿದ ಕ್ರಯ ಪತ್ರದಲ್ಲಿಯೂ ಸಹ ದಕ್ಷಿಣ ದಿಕ್ಕಿಗೆ ಮಾದಶೆಟ್ಟಿರವರ ಜಮೀನು ಎಂದು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ

ಆಸ್ತಿಯು ಹಿತ್ತಲು ಮತ್ತು ಖಾಲಿ ಜಾಗ ಆಗಿದ್ದು , ನನ್ನ ಅತ್ತೆಯವರು ಖರೀದಿ ಮಾಡಿದ ಕ್ರಯ ಪತ್ರ ಮತ್ತು ಮಾರಾಟ ಮಾಡಿದ ಕ್ರಯ ಪತ್ರದಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಪ್ರಕಾಶಮೂರ್ತಿ ರವರ ನಡುವೆ ವಿಭಾಗವಾದ ಕುರಿತು ದಾಖಲೆಗಳು ಇರುತ್ತವೆಯೇ ಎಂಬ ಪ್ರಶ್ನೆಗೆ ವಿಬಾಗವಾದ ನಂತರ ಖಾತೆಗಳಾಗಿರುತ್ತವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಮಗೆ ಪಿತ್ರಾರ್ಜಿತವಾಗಿ ಬಂದ ಮನೆ ಮತ್ತು ಖಾ

ಲಿ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಮಹದೇವಶೆಟ್ಟಿ, ಬಸವಶೆಟ್ಟಿ ಮತ್ತು ಕೃಷ್ಣಶೆಟ್ಟಿ ರವರ ಜಮೀನಿಗೆ ಹೊಂದಿಕೊಂಡಂತೆ ನನ್ನ ಗಂಡ ಶೌಚಾಲಯ ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿಯು ಸದರಿಯವರ ಜಮೀನು ನಮ್ಮ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಶೌಚಾಲಯ ಸ.ನಂ.193/8 ರ ಆಸ್ತಿಯಲ್ಲಿ ಇರುತ್ತದೆ. ಸದರಿ ಶೌಚಾಲಯದಿಂದ ಖಾಲಿ ಜಾಗ ಸುಮಾರು 15-20 ಅಡಿ ದೂರದಲ್ಲಿದ್ದು , ತದನಂತರ ಪ್ರಕಾಶಮೂರ್ತಿ ರವರ ಮನೆ ಹಾಗೂ ಅದರ ನಂತರ ನಮ್ಮ ಮನೆ ಇರುತ್ತದೆ. ದಾವಾ ಆಸ್ತಿಯು ಸಾಗುವಳಿ ಮಾಡುವಂತಹ ಜಮೀನು ಆಗಿರುವುದಿಲ್ಲ ಮತ್ತು ಸದರಿ ಆಸ್ತಿಯು ನಾವು ವಾಸ ಮಾಡುತ್ತಿರುವ ಮನೆ, ಹಿತ್ತಲು ಹಾಗೂ ಶೌಚಾಲಯದ ಜಾಗ ಆಗಿರುತ್ತದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು

ಗ್ರಾಮ ಠಾಣಾ ವ್ಯಾಪ್ತಿಗೆ ಒಳಪಡುತ್ತದೆ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಗಳ ಮನೆ ಮತ್ತು ಇತರ ಜಾಗಕ್ಕೆ ಸಂಬಂಧಿಸಿದಂತೆ ಅವರವರ ಹೆಸರುಗಳಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಖಾತೆ ಇರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗಾಗಿ ವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**